ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ

**C. C. No.840/2025**

**CW.9-PW.5**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:- ದಿನಾಂಕ: **20.06.2026**

| | |
|---|---|
| ಸಾಕ್ಷಿಯ ಹೆಸರು:- | ದತ್ತುರಾವ |
| ತಂದೆ ಹೆಸರು :- | ಗಣಪತರಾವ್ |
| ವಯಸ್ಸು :- | 52 ವರ್ಷ |
| ಉದ್ಯೋಗ :- | ಪೋಲಿಸ್ ಮುಖ್ಯ ಪೇದೆ |
| ವಾಸ ಸ್ಥಳ :- | ಬಸವಕಲ್ಯಾಣ |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ಹುಲಸೂರು ಪೋಲಿಸ್ ಠಾಣೆಯಲ್ಲಿ 2016 ರಿಂದ 2022 ರವರೆಗೆ ಎಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.03.2020 ರಂದು ಚಾಸಾ.1 ರವರು ಠಾಣೆಗೆ ಹಾಜರಾಗಿ ಪಂಚನಾಮೆ, ದೂರು ಮತ್ತು 1 ನೇ ಆರೋಪಿಯನ್ನು ಹಾಜರುಪಡಿಸಿದ್ದು, ನಾನು ಸದರಿ ದೂರನ್ನು ಸ್ವೀಕರಿಸಿಕೊಂಡು ಅದನ್ನು ಠಾ.ಗು.ನಂ.18/2020 ಕ್ಕೆ ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಚಾಸಾ.4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ 1 ನೇ ಆರೋಪಿಗೆ ಕಲಂ.41(ಎ) ಸಿ.ಆರ್. ಪಿ.ಸಿ ಅಡಿಯಲ್ಲಿ ನೋಟೀಸ್ ನೀಡಿರುತ್ತೇನೆ ನಂತರ ದಿನಾಂಕ 16.06.2020 ರಂದು 2 ನೇ ಆರೋಪಿಗೂ ಕೂಡಾ ಕಲಂ.41(ಎ) ಸಿ.ಆರ್. ಪಿ.ಸಿ ಅಡಿಯಲ್ಲಿ ನೋಟೀಸ್ ನೀಡಿರುತ್ತೇನೆ. ನಂತರ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿನಾಂಕ 04.07.2020 ರಂದು ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಗಳನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಮು-ಮಾ.1 ನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ.

ಜ್ಞಾಪನಾ ಪತ್ರವನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿಯನ್ನು ನಿಪಿ.5 ಎಂದು ಗುರುತಿಸಲಾಯಿತು. ನೋಟೀಸಗಳನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಗಳನ್ನು ನಿಪಿ.6(ಎ) ಮತ್ತು ನಿಪಿ.7(ಎ) ಎಂದು ಗುರುತಿಸಲಾಯಿತು. ಎಫ್ ಎಸ್ ಎಲ್ ವರದಿಯನ್ನು ನಿಪಿ.8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು **:-1** ನೇ ಆರೋಪಿಯ ಪರ:ಶ್ರೀ**.**ಎಮ್ ಕೆ ಎಚ್ ವಕೀಲರಿಂದ</u>

ಜ್ಞಾಪನಾ ಪತ್ರವನ್ನು ಚಾಸಾ1 ರವರು ಮದ್ಯಾಹ್ನ 12.50 ಗಂಟೆ ಸುಮಾರಿಗೆ ನೀಡಿರುತ್ತಾರೆ. ಆ ಸಮಯದಲ್ಲಿ ಕೋವಿಡ್-19 ಇತ್ತು. ಆ ಸಮಯದಲ್ಲಿ ಸಾರ್ವಜನಿಕರು ಹೊರಗಡೆ ತಿರುಗಾಡುತ್ತಿರಲಿಲ್ಲ. ಚಾಸಾ.1 ರವರು ಯಾವದೇ ದಾಳಿಯನ್ನು ಮಾಡಿರುವುದಿಲ್ಲ ಮತ್ತು ಮು-ಮಾಲುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು-ಮಾಲಿನ ಮೇಲೆ ಯಾವದೇ ದಿನಾಂಕ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ದಾಳಿ ಮಾಡಿದ ಹೊಲಕ್ಕೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ಸಲ್ಲಿಸಿರುವುದಿಲ್ಲ. ನಾನು ಸರಿಯಾದ ತನಿಖೆಯನ್ನು ಮಾಡದೆ ಆರೋಪಿಗಳ ಮೇಲೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾಳಿ ಮಾಡಿದ ವೇಳೆಯಲ್ಲಿ ಕೋವಿಡ್-19 ಇದ್ದುದ್ದರಿಂದ ಯಾವದೇ ಸಾರ್ವಜನಿಕರು ತಿರುಗಾಡದೆ ಇದ್ದುದ್ದರಿಂದ ಆರೋಪಿಗಳ ಮೇಲೆ ಸುಳ್ಳು ಪ್ರಕರಣವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಂಕೆ-ಸಂಖ್ಯೆಗೋಸ್ಕರ ಆರೋಪಿಗಳ ಮೇಲೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಪಾಟೀ ಸವಾಲು 2 ನೇ ಅರೋಪಿಯ ಪರ ವಕೀಲರು 1 ನೇ ಆರೋಪಿಯ ಪರ ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

**(ಓ.ಹೇ.ಕೇ.ಸ.ಇದೆ)**

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ**.**